## ಲೇಸ್ ಡ್ರೆಸ್; ಕೆಲ ಟಿಪ್ಸ್

- ಲೇಸ್ ಬಟ್ಟೆ ತುಂಬಾ ಪಾರದರ್ಶಕವಾಗಿ ಇರುವುದರಿಂದ ಬಟ್ಟೆಗೆ ತಕ್ಕಂಥ ಲೈನಿಂಗ್ ಆಯ್ಕೆ ಮಾಡಿಕೊಳ್ಳಿ.
- ಲೇಸ್ ಬಟ್ಟೆಯನ್ನು ಮನೆಯಲ್ಲಿಯೇ ಒಗೆಯುವ ಹಾಗಿದ್ದರೆ ಅದನ್ನು ನಿಧಾನವಾಗಿ ಸೋಪ್ ನೀರಿನಲ್ಲಿ ಅದ್ದಿ ಕೈಯಿಂದ ಮಾತ್ರ ಉಜ್ಜಬೇಕು. ಬ್ರಷ್‌ನಿಂದ ಉಜ್ಜಿದರೆ ಎಳೆ ಕಿತ್ತು ಬರುವ ಸಂಭವ ಜಾಸ್ತಿ.
- ಕೆಲವೊಂದು ಲೇಸ್ ತ್ವಚೆಗೆ ಕಂಫರ್ಟ್ ಅಂದೆನಿಸುವುದಿಲ್ಲ. ಚುಚ್ಚಿದ ಅನುಭವ ನೀಡುತ್ತವೆ.
- ಗಾಢ ವರ್ಣದ ಲೇಸ್ ಉಡುಪುಗಳು ಬಣ್ಣ ಬಿಡುವುದು ಸಾಮಾನ್ಯ. ಆದ್ದರಿಂದ ದಿನಬಳಕೆಗೆ ಕಪ್ಪು ಮತ್ತು ಬಿಳಿ ಬಣ್ಣದ ಲೇಸ್‌ನ ಉಡುಪುಗಳನ್ನು ಧರಿಸುವುದು ವಾಸಿ.
- ಲೇಸ್ ಉಡುಪುಗಳನ್ನು ಧರಿಸುವಾಗ ಬಣ್ಣಬಣ್ಣದ ಬೀಡ್ಸ್‌ಗಳ ಸರ, ಕಿವಿಯೋಲೆ ಧರಿಸುವುದು ಸೂಕ್ತ.

ಆಗಿತ್ತು. ಜಮಾನಾ ಬದಲಾದಂತೆ ಹತ್ತಿಯ ದಾರದ ಎಳೆಗಳಿಂದ ಲೇಸ್‌ಗಳನ್ನು ತಯಾರಿಸುವ ಕಾರ್ಯ ಪ್ರಾರಂಭವಾಯಿತು.

60 ರಿಂದ 70 ರ ದಶಕದ ಮಹಿಳೆಯರು ಬರೀ ಕಪ್ಪು, ಬಿಳುಪು ದಾರದ ಎಳೆಗಳಿಂದ ಕ್ರೋಶಾ ಸೂಜಿಯ ಮೂಲಕ ಲೇಸ್‌ಗಳನ್ನು ತಯಾರಿಸಿ ತಮ್ಮ ಸೀರೆಯ ಕೆಳಭಾಗ, ಬ್ಲೌಸ್‌ನ ತೋಳಿನ ಭಾಗ, ಕತ್ತಿನ ಭಾಗದ ವಿನ್ಯಾಸಕ್ಕೆ, ಪುಟ್ಟ ಮಕ್ಕಳು ಧರಿಸುವ ಫ್ರಾಕ್, ಲಂಗ ಮುಂತಾದವುಗಳಿಗೆ ಲೇಸ್ ಅಳವಡಿಸಿ ಅದರ ಅಂದವನ್ನು ಹೆಚ್ಚಿಸುತ್ತಿದ್ದರು. ಅಷ್ಟೇ ಅಲ್ಲದೆ ಮನೆಯ ಅಲಂಕಾರಕ್ಕೂ ಲೇಸ್‌ಗಳನ್ನು ಬಳಸುತ್ತಿದ್ದರು. ನಂತರದ ದಿನಗಳಲ್ಲಿ ಉಡುಪುಗಳ ಕೆಳಭಾಗದ ಅಂದವನ್ನು ಹೆಚ್ಚಿಸಲು ಮಾತ್ರ ಉಪಯೋಗಿಸುತ್ತಿದ್ದ ಲೇಸ್ ಈಗ ಇಡೀ ಉಡುಪಾಗಿಯೇ ಪರಿವರ್ತನೆಗೊಂಡಿರುವುದೇ ಆಶ್ಚರ್ಯ.



ಒಂದು ಕಾಲದಲ್ಲಿ ಒಂದಿಷ್ಟು ಸಿಂಪಲ್ಲಾಗಿ ಮತ್ತು ಒಂದಿಷ್ಟು ಸ್ಟೈಲಿಷ್ ಆಗಿ ಕಾಣಬಯಸುತ್ತಿದ್ದ ಯುವತಿಯರು ನೆಟ್ ಕ್ಲಾತ್‌ಗಳನ್ನು ಬಳಸುತ್ತಿದ್ದರು. ನೆಟ್ ಬಟ್ಟೆಯ ಟಾಪ್ಸ್, ಸಲ್ವಾರ್, ಗಾಗ್ರಾ ಧರಿಸುತ್ತಿದ್ದ ಯುವತಿಯರು ಈಗ ನೆಟ್ ಉಡುಪುಗಳ ಬದಲಾಗಿ ಲೇಸ್ ಉಡುಪುಗಳಿಗೆ ಮೊರೆ ಹೋಗಿದ್ದಾರೆ. ಪುಟ್ಟ ಹುಡುಗಿಯರಿಂದ ಹಿಡಿದು ಎಲ್ಲಾ ವಯೋಮಾನದ ಮಹಿಳೆಯರು ಈ ಲೇಸ್ ಉಡುಪುಗಳಿಗೆ ಮಾರುಹೋಗಿದ್ದಾರೆ. ಈಗ ಏನಿದ್ದರೂ ಲೇಸ್‌ಗಳದ್ದೇ ಕಾರುಬಾರು. ಲೇಸ್‌ನ ಸೀರೆ ಬ್ಲೌಸ್, ಲೇಸ್‌ನ ಟಾಪ್ಸ್, ಸಲ್ವಾರ್ ಸ್ಲೀವ್ ಮತ್ತು ನೆಕ್‌ಲೈನರ್, ಮಿಡಿ, ಗೌನ್‌ಗಳು ಹೀಗೆ ಎಲ್ಲದರಲ್ಲೂ ಲೇಸ್ ಇರಲೇ ಬೇಕು ಎನ್ನುವಂತಾಗಿದೆ.

ಸೆಲೆಬ್ರಿಟಿಗಳು ಹಾಗೂ ಮಾಡೆಲ್‌ಗಳು ಏನೇ ಫ್ಯಾಷನ್ ಮಾಡಿದರೂ ಅದು ಟ್ರೆಂಡ್ ಆಗುತ್ತದೆ. ಈ ಲೇಸ್‌ನ ವಿಷಯದಲ್ಲಿ ಆಗಿದ್ದೂ ಅದೇ. ಫ್ಯಾಷನ್ ಲೋಕದಲ್ಲಿ ಕೆಂಪು ಮತ್ತು ಕಪ್ಪು ಬಣ್ಣದ ಉಡುಪುಗಳಿಗೆ ಎಲ್ಲಿಲ್ಲದ ಆದ್ಯತೆ. ಇವು ಸೆಲೆಬ್ರಿಟಿಗಳಿಗೆ ಒಂದು ಬೋಲ್ಡ್ ಮತ್ತು ಗ್ಲಾಮರಸ್ ಲುಕ್ ನೀಡುತ್ತವೆ. ಇನ್ನು ಈ ಬಣ್ಣಗಳ ಲೇಸ್ ಉಡುಪು ತೊಟ್ಟರಂತೂ ಅವರ ಸೌಂದರ್ಯ ಇಮ್ಮಡಿಯಾಗುವುದರಲ್ಲಿ ಸಂದೇಹವೇ ಇಲ್ಲ.

ಇದನ್ನೇ ಉಪಯೋಗಿಸಿಕೊಂಡ ಬಾಲಿವುಡ್ ಚಿತ್ರ ತಾರೆಯರು ತಾವು ಹೋಗುವ ಚಿಕ್ಕ ಪುಟ್ಟ ಸಮಾರಂಭಗಳಲ್ಲಿಯೂ ಕೂಡ ಕೆಂಪು ಮತ್ತು ಕಪ್ಪು ಬಣ್ಣದ ಲೇಸ್ ಉಡುಪುಗಳನ್ನೇ ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ. ಬಲೆ ಬಲೆಯಂತೆ ಹೆಣೆದಿರುವ ಈ ಲೇಸ್ ಬಟ್ಟೆ ನೋಡಲು ಒಮ್ಮೆ ಪಾರದರ್ಶಕದಂತೆ ಕಂಡರೂ ಏನೂ ಕಾಣುವುದಿಲ್ಲ ಇದೇ ಅದರ ಸ್ಪೆಷಾಲಿಟಿ.

### ಕಲರ್ ಲೇಸ್

ಇದೀಗ ಕಲರ್ ಲೇಸ್ ಟ್ರೆಂಡ್‌ನಲ್ಲಿವೆ. ಗಾಢ ಬಣ್ಣಗಳಾದ ಗುಲಾಬಿ, ಕೆಂಪು, ಹಸಿರು, ಹಳದಿ ಇಂಥ ಎದ್ದು ಕಾಣುವ ಬಣ್ಣಗಳ ಲೇಸ್ ಉಡುಪುಗಳು ಬೋಲ್ಡ್ ಲುಕ್ ನೀಡುವುದರ ಜೊತೆಗೆ ಗ್ಲಾಮರಸ್ ಆಗಿರುತ್ತವೆ. ಹಾಗೇ ಲೇಸ್‌ಗಳಿಂದ ಸಿಂಗಾರಗೊಂಡ ಗೌನ್‌ಗಳು ಎಲಿಗೆಂಟ್ ಲುಕ್‌ನಿಂದ ಕಂಗೊಳಿಸುತ್ತವೆ. ಎರಡು ಬಣ್ಣಗಳ ಲೇಸ್, ಮೆಟಾಲಿಕ್ ಲೇಸ್‌ಗಳು ಅತ್ಯಂತ ಸುಂದರವಾಗಿ ಕಾಣುತ್ತವೆ. ■


ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.
ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517